**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>SC.104/2025</u>**

ಸಾಕ್ಷಿದಾರರ ಹೆಸರು : ಅಜ್ಜಯ್ಯ

ತಂದೆಯ ಹೆಸರು : ವಿರೇಶ

ವಯಸ್ಸು : 18 ವರ್ಷ

ಉದ್ಯೋಗ : ಗ್ಯಾರೇಜ್ ಕೆಲಸ

ವಾಸ ಸ್ಥಳ : ಹೆಗಡೆಯಾಳ್ ಗ್ರಾಮ, ಚಿತ್ರದುರ್ಗ ತಾಲ್ಲೂಕು

ಪಿ.ಡಬ್ಲ್ಯೂ 4

ಸಿ.ಡಬ್ಲ್ಯೂ 9

ದಿ: 12-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ I/c ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>** :

1. ನನಗೆ ಚಾಸಾ-1, 8 ಮತ್ತು 11 ರವರ ಪರಿಚಯ ಇದೆ. ಚಾಸಾ-1 ರವರ ತಮ್ಮ ಶಿವುಕುಮಾರರವರ ಪರಿಚಯ ಇದೆ. ಶಿವುಕುಮಾರರವರು ಈಗ ತೀರಿಕೊಂಡಿರುತ್ತಾರೆ. ಅವರ ಕೊಲೆಯಾಗಿರುತ್ತದೆ. ಜಯಪ್ಪ ಎಂಬುವವರು ಶಿವುಕುಮಾರರವರನ್ನು ಕೊಲೆ ಮಾಡಿದ್ದಾರೆ ಅಂತ ಗೊತ್ತಾಯಿತು. ಶಿವುಕುಮಾರರವರು ಜಯಪ್ಪರವರ ಹೆಂಡತಿಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿರುವುದರಿಂದ ಜಯಪ್ಪರವರು ಶಿವುಕುಮಾರರವರನ್ನು ಕೊಲೆ ಮಾಡಿರುತ್ತಾರೆ.

2. ಹೋದ ವರ್ಷ ನಾನು ನೀರಗಂಟಿ ಕೆಲಸ ಮಾಡುತ್ತಿದ್ದೆ. ಚಾಸಾ-8 ರವರು ಬೆಂಗಳೂರಿನಲ್ಲಿ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದರು. ಶಿವುಕುಮಾರರವರು ಆಂಧ್ರಪ್ರದೇಶದ

ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರಿಬ್ಬರು ಹಬ್ಬದ ಸಮಯದಲ್ಲಿ ಊರಿಗೆ ಬಂದು ಹೋಗುತ್ತಿದ್ದರು. ಹೋದ ವರ್ಷ ಶಿವುಕುಮಾರರವರು ಆಂಧ್ರದಿಂದ ಯುಗಾದಿ ಹಬ್ಬದ ನಿಮಿತ್ಯ ಬಂದಿದ್ದರು. ಚಾಸಾ-8 ರವರು ಆ ಸಮಯದಲ್ಲಿ ಊರಿಗೆ ಬಂದಿದ್ದರು. ನಾನು ಆಗ ಊರಿನಲ್ಲಿ ಇದ್ದೆ. ದಿಃ 04-04-2025 ರಂದು ಸಂಜೆ 7.00 ಗಂಟೆಗೆ ಶಿವುಕುಮಾರರವರು ಚಾಸಾ-8 ರವರ ಬಳಿ ಬಂದು ಚಾಸಾ-10 ರವರು ಫೋನ್ ಮಾಡಿರುತ್ತಾರೆ ಹೋಗಿ ಬರೋಣಾ ಅಂತ ಹೇಳಿದರು. ಅದಕ್ಕೆ ಚಾಸಾ-8 ರವರು ಒಪ್ಪಿ ನಾನು, ಚಾಸಾ-8 ಮತ್ತು ಶಿವುಕುಮಾರರವರು ಚಾಸಾ-8 ರವರ ಬೈಕ್ ನಲ್ಲಿ ಚಾಸಾ-10 ರವರ ಊರಿಗೆ ಹೋದೆವು. ಆ ಊರನ್ನು ತಲುಪಿದಾಗ ರಾತ್ರಿ 8.30 ಗಂಟೆ ಆಗಿತ್ತು. ಊರಿನ ತೋಟದ ಪಕ್ಕದಲ್ಲಿ ಚಾಸಾ-10 ರವರ ಮನೆ ಇತ್ತು ಆದ್ದರಿಂದ ಶಿವುಕುಮಾರರವರು ತೋಟದ ಬಳಿ ಇಳಿಸಲು ಹೇಳಿದರು. ನಮಗೆ ಅಲ್ಲೇ ಇರಲು ಹೇಳಿದರು ಮತ್ತು ಅವರು ಹೋಗಿ ಬರುತ್ತೇನೆ ಅಂತ ಹೇಳಿದರು. ನಾವು ಅಷ್ಟರಲ್ಲಿ ಚಾಸಾ-8 ರವರ ಅತ್ತೆ ಮನೆಗೆ ಹೋಗಿ ಬರೋಣಾ ಅಂತ ಹೋದೆವು. ಶಿವುಕುಮಾರರವರು ರಾತ್ರಿ 9.30 ಗಂಟೆಗೆ ಚಾಸಾ-8 ರವರಿಗೆ ಫೋನ್ ಮಾಡಿ ಅವರಿಗೆ ಬಿಟ್ಟು ಹೋದ ಸ್ಥಳಕ್ಕೆ ಬರಲು ಹೇಳಿದರು. ಆಗ ನಾನು ಮತ್ತು ಚಾಸಾ-8 ರವರು ಆ ಸ್ಥಳಕ್ಕೆ ಹೋದೆವು. ಆಗ ಶಿವುಕುಮಾರರವರು ಇನ್ನೂರು ರೂಪಾಯಿಯನ್ನು ಕೊಟ್ಟು ಊಟ ಮಾಡಿಕೊಂಡು ಡ್ರಿಂಕ್ಸ್ ತೆಗೆದುಕೊಂಡು ಬರಲು ಹೇಳಿದರು. ನಾವು ಹೋಗಿ ಹುಡುಕಾಡಿದೆವು ಆದರೆ ಡ್ರಿಂಕ್ಸ್ ಎಲ್ಲೂ ಸಿಗಲಿಲ್ಲ. ವಾಪಸ್ಸು ಅದೇ ಸ್ಥಳಕ್ಕೆ ಬಂದೆವು. ಆಗ ರಾತ್ರಿ 10.30 ಗಂಟೆ ಆಗಿತ್ತು. ಆ ಸ್ಥಳದಲ್ಲಿ ಶಿವುಕುಮಾರರವರು ಇರಲಿಲ್ಲ. ಚಾಸಾ-8 ರವರು ಶಿವುಕುಮಾರರವರಿಗೆ ಫೋನ್ ಮಾಡಿ ಅವರ ಫೋನ್ ಸ್ವಿಚ್ ಆಫ್ ಬಂತು. ಇನ್ನೊಂದು ನಂಬರಗೆ ಫೋನ್ ಮಾಡಿದಾಗ ಅದನ್ನು ಚಾಸಾ-10 ರವರು ಕಾಲ್ ಸ್ವೀಕರಿಸಿದರು. ಆಗ ಚಾಸಾ-10 ರವರು, ನಾನು ಮತ್ತು ಶಿವುಕುಮಾರರವರು ಮಾತನಾಡುತ್ತಿರುವಾಗ ನನ್ನ ಗಂಡ ಬಂದಿದ್ದು ಮತ್ತು ಶಿವುಕುಮಾರರವರನ್ನು ಹೊರಗೆ ಕಳುಹಿಸಿದರು, ಮನೆಯ ಪಕ್ಕದಲ್ಲಿರುವ ರಸ್ತೆಯಿಂದ ಓಡಿ ಹೋದ ಅವರ ಹಿಂದೆ ಚಾಸಾ-10 ರವರ ಗಂಡ

ಹಿಂಬಾಲಿಸಿದರು. ನಾವು ಶಿವುಕುಮಾರರವರನ್ನು ಹುಡುಕಾಡಿದೆವು ಆದರೆ ಸಿಗಲಿಲ್ಲ. ಶಿವುಕುಮಾರರವರು ಊರಿಗೆ ಹೋಗಿರಬಹುದು ಅಂತ ತಿಳಿದುಕೊಂಡು ನಾವು ನಮ್ಮ ಊರಿಗೆ ಹೋದೆವು.

3. ಮಾರನೇ ದಿನ ಬೆಳಿಗ್ಗೆ 10.30 ಗಂಟೆಗೆ ಹೊನ್ನೂರು ಗ್ರಾಮದ ಹೊಲದಲ್ಲಿ ಶಿವುಕುಮಾರರವರ ಕೊಲೆಯಾಗಿದೆ ಅಂತ ವಿಚಾರ ಗೊತ್ತಾಯಿತು. ನಾನು ಮತ್ತು ಚಾಸಾ-8 ರವರು ಆ ಊರಿಗೆ ಹೋಗಿ ಅಲ್ಲಿ ನೋಡಿದಾಗ ಶಿವುಕುಮಾರರವರ ಮೂಗಿನಿಂದ ರಕ್ತ ಮತ್ತು ಎದೆ ಹೊಟ್ಟೆಗೆಲ್ಲಾ ರಕ್ತ ಬಂದಿತ್ತು. ಚಾಸಾ-10 ರವರ ಕೊಲೆ ಮಾಡಿದ್ದಾರೆ ಅಂತ ಗೊತ್ತಾಯಿತು. ಚಾಸಾ-10 ರವರ ಗಂಡ ಶಿವುಕುಮಾರರವರ ಬಾಯಿಯನ್ನು ಮುಚ್ಚಿ ಉಸಿರಾಡದೇ ಇರುವ ಹಾಗೆ ಮಾಡಿ ಸಾಯಿಸಿದ್ದಾರೆ ಅಂತ ಗೊತ್ತಾಯಿತು. ಚಾಸಾ-10 ರವರ ಗಂಡ ಜಯಪ್ಪ ನ್ಯಾಯಾಲಯದ ಮುಂದೆ ಇರುವ ವಿಸಿಯಲ್ಲಿ ಕಂಡು ಬರುತ್ತಾರೆ. ಸಾಕ್ಷಿದಾರರು ಅವರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ ಬಿ.ಹೆಚ್.ಎಂ. (ಎಲ್.ಎ.ಡಿ.ಸಿ.), ವಕೀಲರಿಂದ ಆರೋಪಿತರ ಪರವಾಗಿ:</u>**

4. ನಾನು, ಚಾಸಾ-8 ಮತ್ತು ಮೃತ ಶಿವುಕುಮಾರರವರು ಸ್ನೇಹಿತರು ಮತ್ತು ಒಂದೇ ಸಮಾಜದವರು ಅಂದರೆ ನಿಜ. ನಾವು ಮೂವರು ಡ್ರಿಂಕ್ಸ್ ಮಾಡುತ್ತೇವೆ ಅಂದರೆ ನಾನು ಮತ್ತು ಶಿವುಕುಮಾರರವರು ಡ್ರಿಂಕ್ಸ್ ಮಾಡುತ್ತೇವೆ. ಆ ದಿನ ನಾವು ಮೂವರು ಡ್ರಿಂಕ್ಸ್ ಮಾಡಿದ್ದೆವು ಅಂದರೆ ಸುಳ್ಳು. ನಾವೆಲ್ಲಾ ಡ್ರಿಂಕ್ಸ್ ಮಾಡಿ ಆ ಊರಿನಲ್ಲಿ ಇಸ್ಪೇಟ್ ಆಡುತ್ತಿದ್ದೆವು ಅಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಆ ದಿನ ನಾನು ಮತ್ತು ಚಾಸಾ-8 ರವರು ಚಾಸಾ-8 ರವರ ಅತ್ತೆ ಮನೆಗೆ ಹೋಗಿದ್ದೆವು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಹೋದ ಬೈಕ್ ನಂಬರ ನನಗೆ ನೆನಪಿಲ್ಲ. ಚಾಸಾ-10 ರವರು ಮೃತ ಶಿವುಕುಮಾರರವರಿಗೆ ಫೋನ್ ಮಾಡಿದ್ದರು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮೃತ ಶಿವುಕುಮಾರರವರ ಮತ್ತು ಚಾಸಾ-10 ರವರ ನಡುವೆ ಅಕ್ರಮ ಸಂಬಂಧ ಇತ್ತು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ಮೃತ ಶಿವುಕುಮಾರರವರ ಮನೆಯವರಿಗೆ ನಾವು ಶಿವುಕುಮಾರರವರು ವಾಪಸ್ಸು ಬಂದಿದ್ದಾರಾ ಅಥವಾ ಇಲ್ಲ ಅಂತ ನಾವು ಕೇಳಲಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ. ಆರೋಪಿಯು ಮೃತ ಶಿವುಕುಮಾರರವರನ್ನು ಕೊಲೆ ಮಾಡಿದ್ದರು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಇಸ್ಪೆಟ್ ಆಡುವವರು ಕುಡಿದು ಶಿವುಕುಮಾರರವರ ಮೇಲೆ ಹಲ್ಲೆ ಮಾಡಿದ್ದಾರೆ ಅಂದರೆ ಸರಿಯಲ್ಲ. ನಾನು ಇದೇ ಮೊದಲ ಬಾರಿ ಈ ಪ್ರಕರಣದ ಆರೋಪಿಯನ್ನು ನೋಡಿದ್ದೇನೆ ಅಂದರೆ ಸರಿಯಲ್ಲ ಮುಂಚಯೇ ನೋಡಿದ್ದೇನೆ. ನಾನು ಮತ್ತು ಚಾಸಾ-8 ರವರು ಮಾರನೇ ದಿನ ಬೆಳಗ್ಗೆ ಆ ಸ್ಥಳಕ್ಕೆ ಹೋಗಿದ್ದೆವು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮೃತ ಶಿವುಕುಮಾರರವರ ಸ್ನೇಹಿತರಾಗಿದ್ದರಿಂದ ದೂರುದಾರಾರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.